**O.S. 377-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 02.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ M U M, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ಭಾರತ ಸಾಕ್ಷ್ಯ ಅಧಿನಿಯಮ 63 ರ ಅಡಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ನಿಪಿ.19 ಎಂದು ಗುರುತಿಸಲಾಯಿತು.

ಮೂರು ಪೋಟೋಗಳನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ.20 ರಿಂದ 22 ಎಂದು ಗುರುತಿಸಲಾಯಿತು.

ಸಿ ಡಿ ಯನ್ನು ನಿಪಿ.22-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಡ್ ಕೆ ಟಿ ವಕೀಲರಿಂದಃ**

ಪ್ರತಿವಾದಿ 1 ಹಾಗೂ 2 ರವರು ಮಂಜುನಾಥ ಅತ್ತರವಾಲೆ ಹಾಗೂ ಆತನ ಹೆಂಡತಿ ಶ್ರೀಮತಿ ವನಿತಾ ಅತ್ತರವಾಲೆ, ಪ್ಲಾಟ್ ನಂಃ 4 ಹಾಗೂ 5 ಗಳಿಗೆ ಸಂಬಂಧಪಟ್ಟಂತೆ ಬಾಂಡಗಳನ್ನು ಸೃಷ್ಟಿ ಮಾಡಿದ್ದಾರೆ ಅಂತಾ ಮಹಾನಗರ ಪಾಲಿಕೆಗೆ ದೂರು ನೀಡಿದ್ದಾರೆ ಅಂದರೆ ಗೊತ್ತಿಲ್ಲ. ದಿಃ 11.4.2024 ರಂದು ಜಗಳವಾದಾಗ ಪ್ಲಾಟ ನಂಃ 4 ಹಾಗೂ 5 ರಲ್ಲಿ ನಾನು ಇದ್ದೇನೆ ಅಂದರೆ ಸರಿಯಲ್ಲ. ನಾನು, ಮಂಜೂನಾಥ ಅತ್ತರವಾಲೆ ಹಾಗೂ ವನಿತಾ ಅತ್ತರವಾಲೆ ಹಾಗೂ ಪ್ರತಿವಾದಿ 1 ಹಾಗೂ 2 ಗಳ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದರಿಂದ ಅವರು 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂಃ 354-2024 ದಾವೆ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ನನ್ನ ವಕೀಲರ ಮೂಲಕ ಮೇಲೆ ಹೇಳಿದ ದಾವೆಯಲ್ಲಿ ಹಾಜರಾಗಿದ್ದೇನೆ ಅಂದರೆ ಸರಿ. ಪ್ಲಾಟ ನಂಃ 4 ಹಾಗೂ 5 ಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿ 1 ಹಾಗೂ 2 ರವರು ಸಲ್ಲಿಸಿದ ಖರೀದಿ ಪತ್ರಗಳನ್ನು ನಾವು ಪ್ರಶ್ನೆ ಮಾಡಿಲ್ಲ. ಇದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ. ಸ ನಂಃ 64 ರಲ್ಲಿ ಬೈರಿದೇವರಕೊಪ್ಪದಲ್ಲಿ, 1 ರಿಂದ 55 ಪ್ಲಾಟುಗಳಾಗಿದ್ದು ಅದರಲ್ಲಿ ಒಂದು ಗಣಪತಿ ಗುಡಿ ಇದೆ ಅಂದರೆ ಸರಿ. ಪ್ರತಿ ವರ್ಷ ಗಣೇಶ ಚತುರ್ಥಿ ಅಂಗವಾಗಿ ಅನ್ನ ಸಂತಪರ್ಣೆ 11 ದಿನ ಪ್ಲಾಟ 4 ಹಾಗೂ 5 ರಲ್ಲಿ ನಡೆಯುತ್ತಿದೆ. ಯಾಕೆಂದರೆ ಖಾಲಿ ಇದೆ ಆದ್ದರಿಂದ ನಡೆಯುತ್ತಿದೆ.

**O.S. 377-24** **PW : 1**

1988 ರಿಂದ ಪ್ಲಾಟ ನಂ: 4 ಹಾಗೂ 5 ಗಳಿಗೆ ಪ್ರತಿವಾದಿ 1 ಹಾಗೂ 2 ರವರು ಪರತ್ಯೇಕವಾಗಿ ಕರ ಕಟ್ಟಿದ್ದು ಮತ್ತು ಪಿ ಐ ಡಿ ನಂಬರ ಬಿದ್ದಿದೆ ಅಂದರೆ ಸರಿಯಲ್ಲ. ನನಗೆ ಓದಲು ಬರುವುದಿಲ್ಲ. ನಾನು ಈಗ ಹಾಜರಪಡಿಸಿದ ಫೋಟೋಗಳು ಪ್ರತಿವಾದಿ 1 ಹಾಗೂ 2 ರವರ ಮಾಲ್ಕಿ ಹಕ್ಕಿಗೆ ಸಂಬಂಧಪಟ್ಟ ಪ್ಲಾಟಗೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ಅಸಲು ಮಾಲಿಕ ಸ ನಂ: 64 ರ ಮಾಲಿಕ ಕೆಂಚಪ್ಪ ಮಾಯಕರ, ಶಿವಪ್ಪ ಮಾಯಕರ ಹಾಗೂ ಈಶ್ವರಪ್ಪ ಮಾಯಕರ ರವರ ಜೊತೆಗೆ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ ಸರಿಯಲ್ಲ. ಅತ್ತರವಾಲೆಗೆ ನಾನೇ ವ್ಯವಹಾರ ಮಾಡಿಸಿದ್ದೇನೆ. ನಾನು ಹಾಗೂ ಮಂಜುನಾಥ ಅತ್ತರವಾಲೆ ರವರಿಗೆ ಪ್ರತಿವಾದಿ 1 ಹಾಗೂ 2 ರವರಿಗೆ ತೊಂದರೆ ಕೊಡಲು ಕಾಗದ ಪತ್ರ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರಿಗೆ ತೊಂದರೆ ಕೊಡಲು ನಾನು ನ್ಯಾಯಾಲಯದ ಆದೇಶದ ಪ್ರಕಾರ ಮುದ್ರಾಂಕ ಶುಲ್ಕ ಕಟ್ಟಿಲ್ಲ ಅಂದರೆ ಹಣವಿಲ್ಲದ ಕಾರಣ ಕಟ್ಟಿಲ್ಲವೆಂದು ಹೇಳುತ್ತಾರೆ. ಪ್ಲಾಟ ನಂ: 3 ರಲ್ಲಿ ಬಸವರಾಜ ಬೆಲ್ಲದ ಎಂಬುವವರು ಮನೆ ಕಟ್ಟಿದ್ದಾರೆ ಅಂದರೆ ಬೇರೆಯವರು ಮನೆ ಕಟ್ಟಿದ್ದಾರೆಂದು ಹೇಳುತ್ತಾರೆ. 2 ನೇ ಪ್ರತಿವಾದಿ ಪ್ಲಾಟ ನಂ: 5 ರಲ್ಲಿ ಕಂಪೌಂಡ ಕಟ್ಟಲು ಪಾಯಾ ತೆಗೆದಿದ್ದಾರೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.